# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ, ಹುಬ್ಬಳ್ಳಿ

**ಸಿಸಿ ನಂಃ 1823 ಃ 2015**

ಪಿಡಬ್ಲೂಃ **11**
ಸಿಡ್ಲೂ ಃ **5**

| | |
|---|---|
| ಸಾಕ್ಷಿಯ ಹೆಸರು | ಃ ಆನಂದ |
| ತಂದೆಯ ಹೆಸರು | ಃ ವಾಮನ ಜೋಶಿ |
| ವಯಸ್ಸು | ಃ **40** ವರ್ಷ |
| ಉದ್ಯೋಗ | ಃ ಮ್ಯಾನೇಜರ ವಿಆರ್‌ಎಲ್‌ದಲ್ಲಿ |
| ವಾಸ ಸ್ಥಳ | ಃ ಹುಬ್ಬಳ್ಳಿ |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ **27–07–2017**

<u>ಮುಖ್ಯ ವಿಚಾರಣೆ ಎಪಿಪಿ ಯವರಿಂದಃ</u>

**2014** ಹಾಗೂ **2015** ರ ಸಮೀಪ ಬಸವನ ಸರ್ಕಲ ಕಚೇರಿಯಲ್ಲಿ ಒಬ್ಬ ಪ್ರಯಾಣಿಕನ ಲ್ಯಾಪಟಾಪ್ ಹಾಗೂ ಹಣ ಕಳುವಾಯಿತು ಎಂಬ ಬಗ್ಗೆ ನಮ್ಮ ಕಚೇರಿಯಲ್ಲಿಯ ಕ್ಲರ್ಕ ನನಗೆ ಹೇಳಿದ. ಹುಬ್ಬಳ್ಳಿಯಿಂದ ಹೈದರಾಬಾದಗೆ ಹೋಗುವ ಬಸ್‌ನಲ್ಲಿ ಒಂದು ಲ್ಯಾಪಟಾಪ ಹಾಗೂ ಹಣ ಕಳ್ಳತನ ಆದ ಬಗ್ಗೆ ರಾಜೇಶ ಕಾಮತ್ ಅಂದರೆ ನನ್ನ ಕಚೇರಿ ಕ್ಲರ್ಕ ಹೇಳಿರುತ್ತಾರೆ. ಚಾಸಾ–**8** ರವರು ಪ್ರಯಾಣಿಕ ಆಗಿರುತ್ತಾರೆ. ಆ ದಿನ ಚಾಸಾ–**8** ಇವರುಕೂಡಾ ನನಗೆ ಲ್ಯಾಪಟಾಪ್ ಹಾಗೂ ಸುಮಾರು **1** ಲಕ್ಷ ರೂ ಕಳುವಾಗಿದೆ ಅಂತಾ ಹೇಳಿರುತ್ತಾರೆ. ನಾನು ಚಾಸಾ–**8** ರವರಿಗೆ ಪೊಲೀಸ ದೂರು ಕೊಡಿ ಅಂತಾ ಹೇಳಿದೆ . ದೂರನ್ನು ಕೊಟ್ಟ ಎರಡು ದಿನ ನಂತರ ನಾನು ಠಾಣೆಗೆ ಹೋದೆ . ಅಲ್ಲಿ ಠಾಣೆಯಲ್ಲಿ ಸುಮಾರು **5–6** ಜನ ಇದ್ದರು. ಠಾಣೆಯಲ್ಲಿ ನಾನು ಆರೋಪಿಯನ್ನು ಗುರುತಿಸಿದೆ , ಆರೋಪಿಯನ್ನು ಸಿಸಿ ಟಿವಿಯಲ್ಲಿ ನೋಡಿದ್ದು ಆ ಆಧಾರದಲ್ಲಿ ಆರೋಪಿಯನ್ನು ಗುರುತಿಸಿರುತ್ತೇನೆ. ನಂತರ ನಾನು ಪೊಲೀಸ ಠಾಣೆಗೆ ಹೋಗಿಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುತ್ತಾರೆ. ಆರೋಪಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಎದರುದಾರ ಪರ ವಕೀಲರು ಆರೋಪಿಯನ್ನು ಗುರುತಿಸಲು ಯಾವುದೇ ಆಕ್ಷೇಪಣೆ ಮಾಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟಿ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಪಂಚನಾಮೆಯನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಯಿತು)

<u>ಪಾಟೀ ಸವಾಲು ಎಪಿಪಿ ಯವರಿಂದಃ</u>

2. ಸಾಕ್ಷಿಗೆ ಅವರು ಪೊಲೀಸರ ಮುಂದೆ ದಿನಾಂಕಃ 29–8–2014 ರಂದು ನೀಡಿದ ಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿಯು ನಾನು ಆ ರೀತಿ ಪೊಲೀಸರ ಮುಂದೆ ಹೇಳಿರುತ್ತೇನೆ ಎನ್ನುತ್ತಾರೆ. (ಸಾಕ್ಷಿಗೆ ಆ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ ಹೇಳಿದ್ದು ಸಾಕ್ಷಿಯು ನಿಜ ಎನ್ನುತ್ತಾರೆ).

3. ಅದೇ ರೀತಿ ದಿನಾಂಕಃ 21–5–2015 ರಂದು ನಾನು ಪೊಲೀಸರ ಮುಂದೆ ಪುನಃ ಹೇಳಿಕೆ ನೀಡಿರುತ್ತೇನೆ ಎಂದರೆ ನಿಜ. (ಸಾಕ್ಷಿಗೆ ಆ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ ಹೇಳಿದ್ದು ಸಾಕ್ಷಿಯು ನಿಜ ಎನ್ನುತ್ತಾರೆ).

4. ಸದರಿ ಆರೋಪಿಯ ಬಗ್ಗೆ ಆರೋಪಿತರನ್ನು ವಿಚಾರಿಸಲಾಗಿ ಆರೋಪಿತರು ತಾವು ಮಾಡಿದ ಆರೋಪದ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಅದೇ ಸಮಯದಲ್ಲಿ ಆರೋಪಿತರು ಈ ಕೇಸಿನಲ್ಲಿಯ ಆರೋಪವನ್ನು ಹೊರತುಪಡಿಸಿ ಬೇರೆ ಆರೋಪಗಳನ್ನು ಮಾಡಿದ್ದಾರೆ ಅಂತಾ ಒಪ್ಪಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಆ ದಿನ ಬೇರೆ ಆರೋಪಕ್ಕೆ ಸಂಬಂದಪಟ್ಟಂತೆ ಸ್ಕ್ರೂಡ್ರೈವರಗಳನ್ನು ನನಗೆ ತೋರಿಸಿದ್ದರು ಎಂದರೆ ನಿಜ. ಆರೋಪಿಗಳು ಆರೋಪ ಮಾಡಿದ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ನಿಜ.

5. ಅದೇ ರೀತಿ ದಿನಾಂಕಃ 8–6–2015 ರಂದು ಕೂಡಾ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ನಿಜ. (ಸಾಕ್ಷಿಗೆ ಆ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ ಹೇಳಿದ್ದು ಸಾಕ್ಷಿಯು ನಿಜ ಎನ್ನುತ್ತಾರೆ).

ಪಾಟೀ ಸವಾಲು ಶ್ರೀ.ಆರ್ ಬಿ ಸಿ ವಕೀಲರಿಂದಃ

6. ನಾನು ಮೆಕ್ಯಾನಿಕಲ್‌ನಲ್ಲಿ ಡಿಪ್ಲೋಮಾ ಮಾಡಿರುತ್ತೇನೆ. ಇಡೀ ದೇಶದಲ್ಲಿ ಪ್ರೈವೇಟ್ ಸೆಕ್ಟರಿನಲ್ಲಿ ಪಬ್ಲಿಕ ಟ್ರಾನ್ಸಪೋರ್ಟಗೆ ನಮ್ಮ ಸಂಸ್ಥೆ ಮೊದಲನೇದು ಎಂದರೆ ನಿಜ. ಪಬ್ಲಿಕ ಸೆಕ್ಟರಿನಲ್ಲಿ ಇಲ್ಲದ ಎಲ್ಲಾ ಸೆಕ್ಯುರಿಟಿ ಮೇಜರ್ಸಗಳನ್ನು ನಮ್ಮ ಕಂಪನಿಯವರು ಅಳವಡಿಸಿಕೊಂಡಿದ್ದಾರೆ ಎಂದರೆ ನಿಜ. ನಮ್ಮ ಕಂಪನಿಗೆ ಅದಲ್ಲದೇ ಸ್ವಂತದ ನಿಯಮಗಳು ಇರುತ್ತವೆ ಎಂದರೆ ನಿಜ. ನಾನು 24 ವರ್ಷಗಳಿಂದ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಬಸ್ಸಿನಲ್ಲಿ ಏನಾದರೂ ಕಳ್ಳತನ ಆದರೆ ತಕ್ಷಣವೇ ಸಿಸಿ ಟಿವಿ ಪುಟೇಶನ ಸಿಡಿಯೊಂದಿಗೆ ನಮ್ಮ ಆಫೀಸಿನವರು ದೂರು ಕೊಡಬೇಕು ಅಂತಾ ನಮ್ಮಲ್ಲಿ ಸ್ಟ್ಯಾಂಡಿಂಗ್ ಇನಸ್ಟ್ರಕ್ಷನ ಇದೆ ಎಂದರೆ ನಿಜ. ಚಾಸಾ–8 ಘಟನೆ ಬಗ್ಗೆ ಹೇಳಿದ ತಕ್ಷಣ ಆ ದಿನದ ಘಟನೆ ಬಗ್ಗೆ ನಾವು ಸಿಸಿ ಟಿವಿಯ ಸಿಡಿಯನ್ನು ದೂರನ್ನು ಕೊಡಲು ಕೊಟ್ಟು ಕಳಿಸಿದೇವು.

7. ನಮ್ಮ ಆಫೀಸಿನಲ್ಲಿ ಕೆಲಸ ಮಾಡುತ್ತಿರುವಾಗ ಆಫೀಸಿನಿಂದ ಹೊರಗೆ ಬರಬೇಕಾದರೆ ಎಂಟ್ರಿ ಮಾಡಿ ಬರಬೇಕಾಗುತ್ತದೆ ಎಂದರೆ ನಿಜ. ದಿನಾಂಕಃ 29–8–14, 21–5–15 ಹಾಗು 08–6–15 ಹಾಗೂ 29–8–15 ರಂದು ನಾನು ಎಲ್ಲಿಯೂ ಎಂಟ್ರಿ ಮಾಡಿರುವುದಿಲ್ಲ.

8. ಈ ಮೇಲೆ ಎಪಿಪಿ ಯವರು ಓದಿ ಹೇಳಿದ ವಿಷಯಗಳನ್ನು ಈ ನ್ಯಾಯಾಲಯದಲ್ಲಿ ಕೇಳಿರುವುದಕ್ಕಿಂತ ಮುಂಚೆ ನಾನು ಸ್ವಂತಕ್ಕೆ ಕೇಳಿ ತಿಳಿದುಕೊಂಡಿರುವುದಿಲ್ಲ. ಸಿಸಿ ಟಿವಿಯಲ್ಲಿ ನಾನು ನೋಡಿದಾಗ 3 ಜನ ಆರೋಪಿಗಳು ಇದ್ದರು. ಆ ಮೂರೂ ಜನರ ಪುಟೇಸನ್ನು ಪೆನ್‌ಡ್ರೈವಿನಲ್ಲಿ ಕೊಟ್ಟು ಕಳಿಸಿರುತ್ತೇನೆ. ಇಂತಹ ಘಟನೆ ಬಗ್ಗೆ ನಮ್ಮ ಸಂಸ್ಥೆಯ ಮಾಲೀಕರಿಗೆ ತಿಳಿಸಬೇಕು ಎಂದರೆ ನಿಜ.

9. ದಿನಾಂಕಃ 21–5–2015 ರಂದು ನನಗೆ ಸುಮಾರು 10 ಜನರನ್ನು ತೋರಿಸಿದರು. ನನಗೆ ಹಾಗೂ ಆ 10 ಜನರ ಮಧ್ಯೆ ಯಾವುದೇ ಕೊಡುವ ಅಥವಾ ತೆಗೆದುಕೊಳ್ಳುವ ವ್ಯವಹಾರ ಇಲ್ಲ. ಅವರನ್ನು ಠಾಣೆಯಲ್ಲಿ ತೋರಿಸುವುದಕ್ಕಿಂತ ಮುಂಚೆ ಅವರನ್ನು ನೋಡುವ ಯಾವುದೇ ಪ್ರಸಂಗ ಬಂದಿರುವುದಿಲ್ಲ. ಇವತ್ತು ತೆರೆದ

ನ್ಯಾಯಾಲಯದ ಒಳಗಡೆ ಬರುವ ಪೂರ್ವದಲ್ಲಿ ಪೊಲೀಸರು ನನಗೆ ಹೇಳಿಕೆಗಳನ್ನು ಓದಿ ಹೇಳಿರುತ್ತಾರೆ ಎಂದರೆ ನಿಜ. ನಾನು ಸಿಸಿ ಟಿವಿಯಲ್ಲಿ ನೋಡಿದ ಜನರು ಹಾಗೂ **21–5–15** ರಂದು ಠಾಣೆಯಲ್ಲಿ ತೋರಿಸಿದ ವ್ಯಕ್ತಿಗಳಿಗೆ ಯಾವುದೇ ಹೊಲಿಕೆ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಬಸ್ಸು ಬಿಟ್ಟ ನಂತರ ಅದು ಯಾವುದೇ ಕಾರಣಕ್ಕೂ ವಾಪಾಸ ಬರುವುದಿಲ್ಲ ಎಂದರೆ ನಿಜ. ಆ ದಿನ ಆ ಬಸ್ಸು ವಾಪಾಸ ಬಂದಿರುವುದಿಲ್ಲ.

**10**. ಆ ದಿನ ಠಾಣೆಯಲ್ಲಿ ಕಳುವಾದ ಹಣ ನಾನು ನೋಡಿರುವುದಿಲ್ಲ. ಒಂದು ಬಸ್ಸಿನಲ್ಲಿ ಒಟ್ಟು **3** ಜನ ಸಿಬ್ಬಂದಿ ಇರುತ್ತಾರೆ, ಅವರಲ್ಲಿ ಇಬ್ಬರು ಡ್ರೈವರ ಹಾಗೂ ಒಬ್ಬ ಕ್ಲಿನರ್. ಕ್ಲಿನರ್ ನು ಬಸ್ಸಿನಲ್ಲಿಯ ಪ್ರಯಾಣಿಕರು ಆಯಾ ಸ್ಥಾನದಲ್ಲಿ ಇದ್ದಾರೋ ಇಲ್ಲ ಎಂಬುದನ್ನು ಪರಿಶೀಲಿಸುತ್ತಾರೆ ಎಂದರೆ ನಿಜ. ಆ ಬಸ್ಸು ಓಲೋ ಬಸ್ ಆಗಿರುತ್ತದೆ. ಬಸ್ಸಿಗೆ ಹಾಗೂ ಪ್ರಯಾಣಿಕರಿಗೆ ಸಂಬಂದ ಇಲ್ಲದ ಹಾಗೂ ಟಿಕೇಟ ಇಲ್ಲದ ಜನರನ್ನು ನಾವು ಬಸ್ಸಿನಲ್ಲಿ ಬಿಡುತ್ತೇವೆ. ಇದೆಲ್ಲದರ ವಿವರಗಳು ಸಿಸಿ ಟಿವಿನಲ್ಲಿ ರೆಕಾರ್ಡ ಆಗುತ್ತವೆ ಎಂದರೆ ಸರಿ ಹಾಗೂ ಅದನ್ನೇ ನಾನು ಕೊಟ್ಟು ಕಳಿಸಿರುತ್ತೇನೆ.

ಮರು ವಿಚಾರಣೆಃ ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು )

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಹುಬ್ಬಳ್ಳಿ.